ಬಸವ ಕಲ್ಯಾಣದಲ್ಲಿ ಸಹಾಯಕ ಪ್ರದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಸ್ಥಾಪನೆ

3026 - ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಬಸವ ಕಲ್ಯಾಣದಲ್ಲಿ ಅತೀ ಹೆಚ್ಚಿನ ಲಾರಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಇಲ್ಲಿ ಇರುವ ಅಧಿಕ ಲಾರಿಗಳ ಸಂಖ್ಯೆಗಳನ್ನು ಗಮನಿಸಿ ಒಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಪ್ರಾರಂಭಿಸುವುದು ಅಗತ್ಯವಿದೆಯೇ? ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು? ಇದರಿಂದ ಹೊರ ರಾಜ್ಯಗಳಿಗೆ ಸೋರಿ ಹೋಗುತ್ತಿರುವ ಆದಾಯವನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲವೇ?*

3) *ಒಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯನ್ನು ತೆರೆಯಲು ಸರ್ಕಾರ ಹಾಕಿಕೊಂಡಿರುವ ಮಾನದಂಡವೇನು?*

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಈಗಾಗಲೇ ಬೀದರ್ ಜಿಲ್ಲೆಯಲ್ಲಿ ಬೀದರ್ ಮತ್ತು ಭಾಲ್ಕಿಯಲ್ಲಿ ಎರಡು ಕಛೇರಿಗಳು ಅಸ್ತಿತ್ವದಲ್ಲಿವೆ. ಬಸವ ಕಲ್ಯಾಣದಲ್ಲಿ ಕಛೇರಿ ಪ್ರಾರಂಭಿಸಲು ಸರ್ಕಾರ ಪರಿಶೀಲಿಸುವುದು. ಬಸವ ಕಲ್ಯಾಣದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿ ಇಲ್ಲದ ಕಾರಣದಿಂದಾಗಿಯೇ ಯಾವುದೇ ಆದಾಯ ಹೊರ ರಾಜ್ಯಗಳಿಗೆ ಸೋರಿ ಹೋಗುತ್ತಿಲ್ಲ.

3) ಉಪ ವಿಭಾಗ ಹಂತದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ ತೆರೆಯಲು 8,000 ರಿಂದ 20,000ವರೆಗೆ ವಾಹನಗಳ ಸಂಖ್ಯೆ ಇರಬೇಕು ಮತ್ತು ಒಂದೂವರೆ ಕೋಟಿ ರೂಪಾಯಿಗಳ ವಾರ್ಷಿಕ ರಾಜಸ್ವ ಸಂಗ್ರಹಣೆಯ ಮನದಂಡ ಹಾಕಿಕೊಳ್ಳಲಾಗಿದೆ.

ತೋಟಗಾರಿಕಾ ಇಲಾಖೆಯಲ್ಲಿರುವ ನೌಕರರ ಸಂಖ್ಯೆ

3027 - ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ) : ಮಾನ್ಯ ತೋಟಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ತೋಟಗಾರಿಕಾ ಇಲಾಖೆಯಲ್ಲಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು?*

ಆ) *ಇಲ್ಲಿಯವರೆಗೆ ಈಗ ಅಮಾನತ್ತಿನಲ್ಲಿರುವ ನೌಕರರ ಸಂಖ್ಯೆ ಹಾಗೂ ವಿವರ ನೀಡುವುದು?*

ಇ) *ಅಮಾನತ್ತಿನಲ್ಲಿರುವ ನೌಕರರು ಯಾವ್ಯಾವ ಪ್ರಕರಣಗಳಲ್ಲಿ ಅಮಾನತ್ತಿನಲ್ಲಿದ್ದಾರೆ?*

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :